ಕೃಷ್ಣಮೂರ್ತಿ ಪ್ರತಿಷ್ಠಾನ ಭಾರತ


# ಸಹ ಪಯಣ

ಬೆಂಗಳೂರು ಶಿಕ್ಷಣ ಕೇಂದ್ರದ ತ್ರೈಮಾಸಿಕ ವಾರ್ತಾಪತ್ರ

ಸಂಪುಟ ೨ ಆಗಸ್ಟ್ ೨೦೦೫ ಬೆಂಗಳೂರು ಸಂಚಿಕೆ ೧

## ಜಿಡ್ಡು ಕೃಷ್ಣಮೂರ್ತಿ 'ಸಂದೇಶ'ದ (teachings) ತಿರುಳು

**(ಈ ಸಂದೇಶವನ್ನು ಮೇರಿ ಲುಟಿನ್ಸ್‌ರವರ "ದಿ ಈಯರ್ಸ್ ಆಫ್ ಫುಲ್‌ಫಿಲ್‌ಮೆಂಟ್" ಪುಸ್ತಕಕ್ಕಾಗಿ ಸ್ವತಃ ಕೃಷ್ಣಮೂರ್ತಿಯವರು ಅಕ್ಟೋಬರ್ ೨೧, ೧೯೮೦ರಲ್ಲಿ ಬರೆದರು.)**



ಯಾವುದೇ ಸಂಘಟನೆ, ಮತ, ಪಂಥ ಆಚರಣೆ, ನಂಬಿಕೆ, ಪುರೋಹಿತರ ಮೂಲಕವಾಗಲೀ ಅಥವಾ ಯಾವುದೇ ತತ್ತ್ವಸಿದ್ಧಾಂತ, ಮಾನಸಿಕವಾದ ತಂತ್ರಾಚರಣೆಗಳ ಮೂಲಕವಾಗಲೀ ಸತ್ಯವನ್ನು ಕಾಣಲು ಸಾಧ್ಯವಿಲ್ಲ. ದೈನಂದಿನ ಬದುಕಿನ ಸಂಬಂಧಗಳ ಕನ್ನಡಿಯ ಮುಖಾಂತರ, ನಮ್ಮನಮ್ಮ ಮನಸ್ಸಿನ ಒಳಲೋಕದ ಅರಿವಿನ ಮೂಲಕ, ಹಾಗೂ ಸತತ ಅವಲೋಕನದ ಮೂಲಕ ಸತ್ಯವನ್ನು ಗ್ರಹಿಸಬಹುದೇ ಹೊರತು ಬೌದ್ಧಿಕ ವಿಶ್ಲೇಷಣೆ ಅಥವಾ ಯೋಚನೆಯ ಒಳಹೊಕ್ಕು ಛೇದಿಸಿ ವಿಶ್ಲೇಷಿಸುವುದರ ಮೂಲಕ ಅಲ್ಲ. ಮನುಷ್ಯ ತನ್ನ ಭದ್ರತೆಗಾಗಿ ನಾನಾ ರೀತಿಯ ಧಾರ್ಮಿಕ, ರಾಜಕೀಯ, ವೈಯಕ್ತಿಕ ಭ್ರಾಂತಿಗಳ ಭದ್ರತಾ ಬೇಲಿಗಳನ್ನು ನಿರ್ಮಿಸಿಕೊಂಡಿದ್ದಾನೆ. ಇವೇ ಸಂಕೇತಗಳಾಗಿ, ವಿಚಾರಗಳಾಗಿ, ನಂಬಿಕೆಗಳಾಗಿ ವ್ಯಕ್ತರೂಪ ಪಡೆಯುತ್ತಿವೆ. ಈ ಕಲ್ಪನೆಗಳ ಹೊರೆ ಮನುಷ್ಯನ ವಿಚಾರದ ಮೇಲೆ, ಸಂಬಂಧದ ಮೇಲೆ, ಆತನ ಸಮಸ್ತ ಜೀವನದ ಮೇಲೆ ಈಗಾಗಲೇ ಅಧಿಕಾರ ನಡೆಸುತ್ತಿದೆ. ಮನುಷ್ಯ ಮನುಷ್ಯರನ್ನು ಪ್ರತ್ಯೇಕಿಸುವ ಮೂಲಕ ಇದು ನಮ್ಮೆಲ್ಲ ಸಮಸ್ಯೆಗಳಿಗೂ ಕಾರಣವಾಗಿದೆ; ಮಾತ್ರವಲ್ಲ ಆತನ ಮನಸ್ಸಿನಲ್ಲಿ ಈಗಾಗಲೇ ರೂಢಗೊಂಡಿರುವ ಈ ಪೂರ್ವಗ್ರಹೀತ ಕಲ್ಪನೆಗಳು ಬದುಕನ್ನು ಗ್ರಹಿಸುವ ಕ್ರಮವನ್ನು ರೂಪಿಸುತ್ತಿರುತ್ತವೆ. ಮನುಷ್ಯನ ಪ್ರಜ್ಞೆಯಲ್ಲಿ ತುಂಬಿದ ಮೂಲದ್ರವ್ಯವೇ ಆತನ ಇಡೀ ಅಸ್ತಿತ್ವವಾಗಿದೆ. ಈ ಮೂಲದ್ರವ್ಯ ಇಡೀ ಮಾನವ ಜನಾಂಗಕ್ಕೆ ಏಕವಾಗಿದೆ. ವೈಯಕ್ತಿಕತೆಯೆಂಬುದು ಪರಂಪರೆ ಮತ್ತು ಪರಿಸರದಿಂದ ಪಡೆದುಕೊಂಡ ನಾಮ, ರೂಪ ಹಾಗೂ ತೋರಿಕೆಯ ಸಂಸ್ಕೃತಿ ಮಾತ್ರ. ಸಮಸ್ತ ಮಾನವ ಜನಾಂಗಕ್ಕೇ ಸಮಾನವಾದ ಪ್ರಜ್ಞೆಯ ಮೂಲದ್ರವ್ಯದಿಂದ 'ಕೇವಲ ತೋರಿಕೆ ಯದಲ್ಲದೆ' ಸಂಪೂರ್ಣ ಬಿಡುಗಡೆ ಪಡೆಯುವುದರಲ್ಲಿ ಮನುಷ್ಯನ ವಿಶಿಷ್ಟತೆ ಅಡಗಿದೆಯೇ ವಿನಾ ಆತನಿಗೆ ಪ್ರತ್ಯೇಕ ಅಸ್ತಿತ್ವವಿಲ್ಲ.

ಸ್ವಾತಂತ್ರ್ಯವೆಂಬುದು ಕೇವಲ ಪ್ರತಿಕ್ರಿಯೆಯಲ್ಲ, ಆಯ್ಕೆಯೂ ಅಲ್ಲ. ತನಗೆ ಆಯ್ಕೆಯ ಅವಕಾಶವಿರುವುದರಿಂದ ತಾನು ಸ್ವತಂತ್ರನೆಂದು ಮನುಷ್ಯ ಭ್ರಮಿಸಿಕೊಂಡಿದ್ದಾನೆ. ಶಿಕ್ಷೆ ಅಥವಾ ಪುರಸ್ಕಾರಗಳ ಭಯವಿಲ್ಲದ, ಉದ್ದೇಶ ರಹಿತವಾದ ಅವಲೋಕನವೇ (observation) ನಿಜವಾದ ಸ್ವಾತಂತ್ರ್ಯ. ಬಿಡುಗಡೆಗೆ ಉದ್ದೇಶವಿಲ್ಲ. ಅದು ಇರುವುದು ಮನುಷ್ಯನ ವಿಕಾಸದ ಕೊನೆಯ ಹಂತದಲ್ಲಲ್ಲ. ಆತನ ಅಸ್ತಿತ್ವದ ಮೊದಲ ಮೆಟ್ಟಲಲ್ಲಿ. ಅವಲೋಕನ ಮಾಡುವಾಗ ನಾವೆಷ್ಟು ಅಸ್ವತಂತ್ರರು ಎಂಬುದು ಅರಿವಿಗೆ ಬರುತ್ತದೆ. ನಮ್ಮ ಅನುದಿನದ ಬದುಕಿನ ಹಾಗೂ ಕ್ರಿಯೆಯ ಆಯ್ಕೆ ರಹಿತ ಅರಿವಿನಲ್ಲಿ ಬಿಡುಗಡೆಯಿದೆ.

**(5ನೇ ಪುಟದಲ್ಲಿ ಮುಂದುವರೆದಿದೆ)**

## ಸಂಪಾದಕೀಯ :

# ನಿನಗೆ ನೀನೇ, ಗೆಳೆಯ ನಿನಗೆ ನೀನೇ.........

ಯಾವುದೇ ಚಿಂತಕರ ವಿಚಾರಗಳು ಕಾಲದ ಅಗ್ನಿಪರೀಕ್ಷೆಯನ್ನು ಎದುರಿಸುವುದು ಅನಿವಾರ್ಯ. ಕೆಲವರು ಅದರಲ್ಲಿ ಮಾಸಿ ಮಂಕಾಗುತ್ತಾರೆ. ಬೇರೆ ಕೆಲವರ ವಿಚಾರಗಳು ದಿನಕಳೆದಂತೆ ತಮ್ಮ ಪ್ರಸ್ತುತತೆಯನ್ನು ಹೆಚ್ಚಿಸಿಕೊಳ್ಳುತ್ತವೆ. ಕಾಲ, ದೇಶ ಮತ್ತು ಸಂದರ್ಭಗಳಲ್ಲಿ ಆಗುವ ಬದಲಾವಣೆಗಳು ಅವರ ವಿಚಾರಗಳನ್ನು ಮುಖ್ಯವಾಗಿಸುತ್ತವೆ. ಜಾಗತೀಕರಣದ ಈ ದಿನಗಳಲ್ಲಿ ಮಹಾತ್ಮಾ ಗಾಂಧಿಜಿಯವರ ಆಲೋಚನೆಗಳು ಪಡೆದಿರುವ ಮಹತ್ವವನ್ನು ಇಲ್ಲಿ ಹೆಸರಿಸಬಹುದು. ಈ ಎರಡು ಬಗೆಯ ಚಿಂತಕರಲ್ಲದೆ ಮೂರನೆಯ ಇನ್ನೊಂದು ಗುಂಪು ಇದೆ. ಇವರು ಹೇಳುವ ಸತ್ಯಗಳು ಕಾಲ ದೇಶಗಳಿಂದ ಅಬಾಧಿತವಾದವು. ಇಂಥವರ ಪರವಾಗಿ ವಾದಮಾಡಿ, ಚಳುವಳಿ ಹೂಡಿ ಇವರ ವಿಚಾರಗಳನ್ನು ಜಾರಿಗೆ ತರಲೆಂದು ಹೋರಾಡುವವರ ಪಡೆ ಇರುವುದಿಲ್ಲ. ಹಾಗೆ ಒಟ್ಟು ಸಮಾಜದ ಸ್ವರೂಪದಲ್ಲಿಯೇ ಪರಿವರ್ತನೆಯನ್ನು ತರಬಲ್ಲೆವು ಎಂಬ ಹೆಮ್ಮೆಯಾಗಲೀ ತಂದೇ ತೀರಬೇಕು ಎಂಬ ಹಂಬಲವಾಗಲೀ ಇವರಿಗೆ ಇರುವುದೂ ಇಲ್ಲ. ಇವರದು ನರಂತರವಾಗಿ ನಿರ್ಮಲವಾಗಿ ಹರಿಯುವ ನದಿಯ ಹಾಗೆ. ಅದರ ಬಳಿಗೆ ಹೋದವರಿಗೆ ಅಮೃತಪಾನದ ಆನಂದ. ಸ್ವತಃ ನದಿಯು ಯಾರನ್ನೂ ಹುಡುಕಿಕೊಂಡು ಹೋಗುವುದಿಲ್ಲ. ಜಿಡ್ಡು ಕೃಷ್ಣಮೂರ್ತಿಯವರು ಈ ಮೂರನೆಯ ಗುಂಪಿನ ವಿರಳಾತಿವಿರಳರಲ್ಲಿ ಒಬ್ಬರು. ಅವರು ಎಂದೆಂದಿಗೂ, "ನಾನು ಹೇಳುವುದೇ ಸರಿ. ಅದನ್ನು ಪಾಲಿಸಿದರೆ ನಿಮಗೆ ಬಿಡುಗಡೆಯ ಬಾಗಿಲುಗಳು ತೆರೆಯುತ್ತವೆ" ಎಂದು ಘೋಸಲಿಲ್ಲ. "ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ" ಎಂದು ಹೇಳುವುದು ಅವರ ಮಾರ್ಗವೇ ಅಲ್ಲ. ಆದ್ದರಿಂದಲೇ ಅವರ ಚಿಂತನೆಯು ಧರ್ಮಗಳಿಗೆ ಅಂಟಿಕೊಳ್ಳುವ ಅಪಾಯಕಾರೀ ಆಯಾಮಗಳಿಂದ ಮುಕ್ತವಾಗಿದೆ.


ಕೃಷ್ಣಜೀ ಅವರು, ತಮ್ಮ ವಿಚಾರಗಳ ಬಗ್ಗೆ ತೋರಿಸಿದ ಈ ನಿರಭಿಮಾನಕ್ಕೆ ಆತ್ಮವಿಶ್ವಾಸದ ಕೊರತೆಯು ಕಾರಣವಲ್ಲ. ತಮ್ಮ ಅನಿಸಿಕೆಗಳು ಸರಿಯೋ ತಪ್ಪೋ ಎಂಬ ಆಶಂಕೆಯೂ ಅವರಲ್ಲಿ ಇರಲಿಲ್ಲ. ತರ್ಕಶುದ್ಧಿಯು ಅವರ ಬರವಣಿಗೆ ಮತ್ತು ಭಾಷಣಗಳ ಬಹು ಮುಖ್ಯ ಲಕ್ಷಣ. ಹಾಗಾದರೆ ನಿಜವಾದ ಕಾರಣವೇನು??

ಸತ್ಯ ಎನ್ನುವುದು, ತಿಳಿವಳಿಕೆ ಎನ್ನುವುದು ಕೇಳಿ ತಿಳಿಯುವ ಸಂಗತಿಗಳಲ್ಲ. ಗುರುವಿನ ಗುಲಾಮನಾದ ಮಾತ್ರಕ್ಕೆ ಅವು ಅಪ್ರಯತ್ನವಾಗಿ ನಮ್ಮದಾಗುವುದಿಲ್ಲ. ಶ್ರೀ ರಾಮಕೃಷ್ಣ ಪರಮಹಂಸರು ಸ್ವಾಮಿ ವಿವೇಕಾನಂದರಿಗೆ ನೀಡಿದ ಸ್ಪರ್ಶಮಾತ್ರದಿಂದಲೇ ನಮ್ಮದಾಗಿಬಿಡುವ ಆನುಭಾವಿಕ ಅರಿವನ್ನು ಕೃಷ್ಣಮೂರ್ತಿಯವರು ಯಾರಿಗೂ ಹಂಚಲಿಲ್ಲ. ಸ್ವತಃ ಅವರು ಅನುಭವಿಸಿದರು ಎನ್ನಲಾಗುವ "ಪ್ರಕ್ರಿಯೆ" ('ದ ಪ್ರಾಸೆಸ್') ಕೂಡ ಯಾವುದೇ ಗುರುವಿನ ಅನುಗ್ರಹದಿಂದ ದೊರೆಯಲಿಲ್ಲ. ಆ ಬಗೆಯ ಅನುಭವವು ಯಾಕೆ, ಹೇಗೆ ಮತ್ತು ಯಾರಿಗೆ ಬರುತ್ತದೆ ಎಂಬುದಾಗಿ ಅವರು ಎಲ್ಲಿಯೂ ಹೇಳಿಲ್ಲ.

ಜೆ.ಕೆ.ಯವರ ಪ್ರಕಾರ ತಿಳಿವಳಿಕೆ ಎನ್ನುವುದು ಸ್ವಂತ ಹುಡುಕಾಟದಿಂದ ಬರುತ್ತದೆ. ಆ ಹುಡುಕಾಟ ಕೂಡ ತನ್ನನ್ನು ಬದಲಾಯಿಸಿಕೊಳ್ಳಲೇ ಬೇಕು ಎಂಬ ಹಟದಿಂದ ಸಾಧ್ಯವಾಗುವುದಿಲ್ಲ. ಕೇವಲ ಮನಸ್ಸಿನಲ್ಲಿ ಮೂಡಿ ಮನಸ್ಸಿನಲ್ಲಿಯೇ ಮುಳುಗುವ ಯಾವ ತಿಳಿವಳಿಕೆಯೂ ಅವರ ಪ್ರಕಾರ ಅರ್ಥಪೂರ್ಣವಲ್ಲ. ನಿಜವಾದ ತಿಳವಳಿಕೆಯು ಮನುಷ್ಯನನ್ನು ಬದಲಾಯಿಸುತ್ತದೆ. ಹಂತ ಹಂತವಾಗಿ, ಕೊನೆಗೆ ಸಮಗ್ರವಾಗಿ. ಇದು ಸಾಧ್ಯವಾಗುವುದು ನಮ್ಮನ್ನು ನಾವು ನಿರ್ಮಮವಾಗಿ, ನಿರ್ಭಾವುಕವಾಗಿ ನೋಡಿಕೊಂಡಾಗ ಮಾತ್ರ. ನೆನ್ನೆಗಳಿಗೆ ಸಾಯುವುದು ಎಂಬ ಮಾತನ್ನು ಅವರು ಮತ್ತೆ ಮತ್ತೆ ಹೇಳುತ್ತಾರೆ. ಹಾಗೆಂದರೆ ಖಂಡಿತವಾಗಿಯೂ ಮರವೆಯಲ್ಲ. ಬದಲಾಗಿ, ನಮ್ಮ ಭೂತಕಾಲವು ವರ್ತಮಾನದ ಗ್ರಹಿಕೆಯನ್ನು ಅಂತೆಯೇ ಭವಿಷ್ಯದ ರೂಪಣವನ್ನು ನಿಯಂತ್ರಿಸಿದಂತೆ ನೋಡಿಕೊಳ್ಳುವ ಎಚ್ಚರ. ಅದು ಪ್ರತಿಯೊಂದು ಸಂಗತಿಯೂ ಚಲನಶೀಲ ಎಂಬ ನಂಬಿಕೆಯನ್ನು ಆಧರಿಸಿದೆ. ಆದ್ದರಿಂದಲೇ ನೆನ್ನೆಯ ನೆನಪುಗಳು ಇಂದಿಗೆ ಹಳೆಯದಾಗಿರುತ್ತವೆ ಮತ್ತು ಸುಳ್ಳಾಗಿರುತ್ತವೆ. ಅವು ಮನಸ್ಸಿಗೆ ಮುದ ನೀಡಬಹುದು. ಆದರೂ ಅವು ಸುಂದರವಾದ ಸುಳ್ಳುಗಳು ಮಾತ್ರ. ಆದರೆ ಈ ಅರಿವು ಇಂದಿನ ಬದುಕನ್ನು ಶೂನ್ಯಗೊಳಿಸುವುದಿಲ್ಲ. ಬದಲಾಗಿ ಇನ್ನಷ್ಟು ಸತ್ಯವಾದ ಮತ್ತು ಸುಂದರವಾದ ವರ್ತಮಾನವನ್ನು ಕಟ್ಟಿಕೊಳ್ಳಲು ಅದು ನೆರವಾಗುತ್ತದೆ. ಈ ಹುಡುಕಾಟ ಮತ್ತು ಬದಲಾವಣೆಗಳು ಒಂಟಿದಾರಿಯಲ್ಲಿ ಹಾಕುವ ಹೆಜ್ಜೆಗಳು. ಅವರೇ ಹೇಳಿದಂತೆ ಅದು ದಾರಿಗಳಿಲ್ಲದ ಲೋಕ.

**ಡಾ।। ಎಚ್.ಎಸ್.ರಾಘವೇಂದ್ರ ರಾವ್**
(ಸಂಪಾದಕ ಮಂಡಳಿಯ ಪರವಾಗಿ)

# ಧರ್ಮನಿಷ್ಠ ಮನಸ್ಸು



ಯಾವ ಪ್ರಯೋಜನಕರವಾದ ಚಳುವಳಿಯೂ, ಆಳವಾದ ಅರ್ಥವುಳ್ಳ ಯಾವ ಕ್ರಿಯೆಯೂ, ನಮ್ಮಲ್ಲಿ ಒಬ್ಬೊಬ್ಬರಿಂದಲೇ ಮೊದಲಾಗಬೇಕು, ತಾನೆ. ಮೊದಲು ನಾನು ಬದಲಾಗಬೇಕು. ಪ್ರಪಂಚದೊಡನೆ ನನ್ನ ಸಂಬಂಧದ ಸ್ವಭಾವ, ರಚನೆಗಳೆಂಥದು ಎಂಬುದನ್ನು ನಾನು ಮೊದಲು ಅರ್ಥ ಮಾಡಿಕೊಳ್ಳಬೇಕು. ಹಾಗೆ ನೋಡುವುದೇ ಕ್ರಿಯೆ. ಆದುದರಿಂದ, ಈ ಪ್ರಪಂಚದಲ್ಲಿ ಬದುಕಿರುವ ಮಾನವನಿಗಾಗಿ ನಾನು ಬೇರೊಂದು ಗುಣವನ್ನುಂಟುಮಾಡುತ್ತೇನೆ. ಆ ಗುಣವು ಸ್ವಾಭಾವಿಕವಾಗಿ ಧರ್ಮನಿಷ್ಠವಾದುದೆಂದು ನನಗನ್ನಿಸುತ್ತದೆ.

ಧರ್ಮನಿಷ್ಠ ಮನಸ್ಸೆಂದರೆ ಒಂದು ಮತದಲ್ಲಿ ನಂಬಿಕೆಯಿಟ್ಟಿರುವ ಮನಸ್ಸಿಗಿಂತ ತೀರ ಭಿನ್ನವಾದುದು. ನೀವು ಧರ್ಮನಿಷ್ಠವಾಗಿದ್ದು, ಹಿಂದೂ, ಮಹಮ್ಮದೀಯ, ಕ್ರೈಸ್ತ, ಬೌದ್ಧ – ಇತ್ಯಾದಿ ಆಗಿರಲು ಆಗುವುದಿಲ್ಲ. ಧರ್ಮನಿಷ್ಠವಾದ ಮನಸ್ಸು ಯಾವುದನ್ನೂ ಹುಡುಕಿಕೊಂಡು ಹೋಗುವುದಿಲ್ಲ, ಅದು ಸತ್ಯವೇನೆಂದು ಪ್ರಯೋಗಗಳನ್ನು ನಡೆಸುವುದಿಲ್ಲ. ಸತ್ಯವೆನ್ನುವುದು ನಿಮ್ಮ ಸುಖ ದುಃಖಗಳಿಂದ ನಿರ್ಧಾರಗೊಂಡದ್ದಲ್ಲ. ಅಥವಾ ನೀವು ಹಿಂದೂ ಅಥವಾ ಮತ್ತಾವ ಮತಕ್ಕೆ ಸೇರಿ ಯಾವುದೋ ಉಪಾಧಿ ಗೊಳಗಾಗಿರುವುದರಿಂದ, ಅದರಿಂದಲೂ ನಿರ್ಧಾರವಾದದ್ದಲ್ಲ. ಧರ್ಮನಿಷ್ಠವಾದ ಮನಸ್ಸು ಯಾವ ಭಯವೂ ಇಲ್ಲದಿರುವ, ಆದುದರಿಂದ ಯಾವ ನಂಬಿಕೆಯೂ ಇಲ್ಲದಿರುವ ಮನಸ್ಸು. ಏನಿದೆಯೋ, ಯಾವುದು ವಾಸ್ತವಿಕವಾಗಿದೆಯೋ ಅದನ್ನು ಮಾತ್ರ ನಂಬಿರುವ ಮನಸ್ಸು.

ಧರ್ಮನಿಷ್ಠವಾದ ಮನಸ್ಸಿನಲ್ಲಿ ಮೌನದ ಒಂದು ಸ್ಥಿತಿಯಿದೆ. ಈ ಮೌನವು, ನಾವಾಗಲೇ ಪರಿಶೀಲಿಸಿರುವ ಹಾಗೆ, ಚಿಂತನೆಯಿಂದ ಉಂಟಾದುದಲ್ಲ, ಅರಿವಿನಿಂದುಂಟಾದುದು. ಅದು ಧ್ಯಾನಿಯು ಸಂಪೂರ್ಣವಾಗಿ ಇಲ್ಲದ ಧ್ಯಾನ. ಅಂಥ ಮೌನದಲ್ಲಿ ಚೈತನ್ಯದ ಸ್ಥಿತಿಯಿರುತ್ತದೆ. ಅದರಲ್ಲಿ ಘರ್ಷಣೆಯಿರುವುದಿಲ್ಲ. ಚೈತನ್ಯವು ಕ್ರಿಯೆ ಮತ್ತು ಚಲನೆ. ಎಲ್ಲ ಕ್ರಿಯೆಯೂ ಚಲನೆ; ಎಲ್ಲ ಕ್ರಿಯೆಯೂ ಚೈತನ್ಯ. ಎಲ್ಲ ಆಸೆಯೂ ಚೈತನ್ಯ. ಎಲ್ಲ ಭಾವನೆಯೂ ಚೈತನ್ಯ. ಎಲ್ಲ ಚಿಂತನೆಯೂ ಚೈತನ್ಯ. ಎಲ್ಲ ಬದುಕೂ ಚೈತನ್ಯ. ಎಲ್ಲ ಜೀವನವೂ ಚೈತನ್ಯ. ಆ ಚೈತನ್ಯವನ್ನು, ವಿರೋಧವಿಲ್ಲದೆ, ಘರ್ಷಣೆಯಿಲ್ಲದೆ, ತಿಕ್ಕಾಟವಿಲ್ಲದೆ, ಹರಿಯಬಿಟ್ಟರೆ ಆಗ ಆ ಚೈತನ್ಯವು ಎಲ್ಲೆಯಿಲ್ಲದ್ದೂ, ಕೊನೆಯಿಲ್ಲದ್ದೂ ಆಗುತ್ತದೆ. ತಿಕ್ಕಾಟ, ಘರ್ಷಣೆಯಿಲ್ಲದಿದ್ದರೆ, ಚೈತನ್ಯಕ್ಕೆ ಎಲ್ಲೆ ಎಂಬುದಿಲ್ಲ. ಘರ್ಷಣೆಯೇ ಚೈತನ್ಯಕ್ಕೆ ಇತಿಮಿತಿಯನ್ನುಂಟುಮಾಡುತ್ತದೆ. ಆದುದರಿಂದ, ಇದನ್ನು ಒಂದು ಸಲ ಕಂಡಮೇಲೆಯೂ ಮಾನವನು, ಚೈತನ್ಯಕ್ಕೆ ಘರ್ಷಣೆಯನ್ನು ಏಕೆ ಒಡ್ಡುತ್ತಾನೆ ? ನಾವು ಜೀವನವೆಂದು ಕರೆಯುವ ಈ ಚಲನೆಯಲ್ಲಿ ಅವನು ಏಕೆ ಘರ್ಷಣೆಯುಂಟು ಮಾಡುತ್ತಾನೆ ? ಅವನಿಗೆ ಶುದ್ಧ ಚೈತನ್ಯವೆನ್ನುವುದು, ಎಲ್ಲೆಯಿಲ್ಲದ ಚೈತನ್ಯವೆನ್ನುವುದು ಕೇವಲ ಭಾವನೆಯೆ ? ಅದರಲ್ಲಿ ವಾಸ್ತವಿಕತೆಯಿಲ್ಲವೆ ?

ನಮಗೆ ಚೈತನ್ಯವು ಅಗತ್ಯ – ನಮ್ಮಲ್ಲಿಯೇ ಸಂಪೂರ್ಣ ಕ್ರಾಂತಿಯನ್ನುಂಟು ಮಾಡುವುದಕ್ಕೆ ಮಾತ್ರವಲ್ಲ, ಸಂಶೋಧನೆ ಮಾಡುವುದಕ್ಕೂ, ನೋಡುವುದಕ್ಕೂ, ಕೆಲಸ ಮಾಡುವುದಕ್ಕೂ ಅಗತ್ಯ. ನಮ್ಮ ಸಂಬಂಧಗಳಲ್ಲಿ ಯಾವ ವಿಧವಾದ ಘರ್ಷಣೆಯಿದ್ದರೂ, ಗಂಡ ಹೆಂಡಿರಿಗಾಗಲಿ, ಮಾನವ ಮಾನವರಿಗಾಗಲಿ, ತತ್ವತತ್ವಗಳಿಗಾಗಲಿ, ಅಂತರಂಗದ ಘರ್ಷಣೆಯೋ, ಬಹಿರಂಗದ ಘರ್ಷಣೆಯೋ ಅದು ಯಾವ ರೂಪದಲ್ಲೇ ಇರಲಿ, ಎಷ್ಟೇ ಸೂಕ್ಷ್ಮವಾಗಿರಲಿ – ಅದೆಲ್ಲ ಚೈತನ್ಯದ ದುರುಪಯೋಗ.

●

# ಗಂಭೀರ ಚಿಂತನ ಎಂಬುದಿದೆಯೆ?

ತಾಳೆ ಮರಗಳಿಂದಾಚೆ ದೂರದಲ್ಲಿ ಅಶಾಂತ, ಕ್ರೂರ ಸಮುದ್ರವಿದೆ. ಅದೆಂದೂ ಶಾಂತವಾಗಿರಲಿಲ್ಲ. ಸದಾ ಬಲವಾದ ಅಲೆಗಳು, ತೀವ್ರ ಸುಳಿಗಳು; ಇರುಳ ಮೌನದಲ್ಲಿ ಅದರ ಭೋರ್ಗರೆತ ಸಾಕಷ್ಟು ದೂರಕ್ಕೆ ಕೇಳುತ್ತಿತ್ತು. ಅದರ ಗಂಭೀರ ದನಿಯಲ್ಲಿ ಒಂದು ಎಚ್ಚರಿಕೆ, ಬೆದರಿಕೆ ಇತ್ತು. ಆದರೆ ಇಲ್ಲಿ ತಾಳೆ ಗಿಡಗಳ ನಡುವೆ ನಿಶ್ಚಲತೆಯಿದೆ. ನಿಡಿದಾದ ನೆರಳಿದೆ. ಹುಣ್ಣಿಮೆ ಚಂದ್ರನಿಂದಾಗಿ ರಾತ್ರಿ ಹಗಲಿನಂತಾಗಿದೆ. ಬಿಸಿಲಿನಲ್ಲಿ ಧಗೆಯಿಲ್ಲ. ಅಲುಗಾಡುವ ತಾಳೆ ಗರಿಗಳ ಮೇಲೆ ಬೀಳುವ ಚಂದ್ರಪ್ರಕಾಶ ಸುಂದರವಾಗಿದೆ. ಬೆಳದಿಂಗಳಷ್ಟೇ ಚೆಲುವಾಗಿಲ್ಲ. ನೆರಳುಗಳು, ಹೊಳೆವ ನೀರು, ಪೃಥ್ವಿಯ ಸಮೃದ್ಧಿ ಎಲ್ಲ ಸುಂದರ. ಆಕಾಶ, ಭೂಮಿ, ಪಕ್ಕದಲ್ಲಿ ನಡೆಯುತ್ತಿರುವ ಮನುಷ್ಯ, ವಟಗುಟ್ಟುವ ಕಪ್ಪೆಗಳು, ದೂರದಲ್ಲೆಲ್ಲೋ ಸಿಳ್ಳು ಹಾಕುವ ಟ್ರೈನು- ಎಲ್ಲ ಮನಸ್ಸಿನಿಂದ ಅಳೆಯಲಾಗದ ಒಂದು ಜೀವಂತ ಸನ್ನಿವೇಶ.

ಮನಸ್ಸು ಒಂದು ಅದ್ಭುತ ಉಪಕರಣ. ಮನುಷ್ಯ ನಿರ್ಮಿಸಿದ ಯಾವ ಉಪಕರಣ ಕೂಡಾ ಇಷ್ಟೊಂದು ಸಂಕೀರ್ಣ, ಗೂಢ ಹಾಗೂ ಅನಂತ ಸಾಧ್ಯತೆಗಳನ್ನು ಹೊಂದಿಲ್ಲ. ನಮಗೆ ಮನಸ್ಸಿನ ಮೇಲು ಮೇಲಿನ ಹಂತಗಳ ಬಗ್ಗೆ ಮಾತ್ರ ಅರಿವಿದೆ. ನಾವು ಆ ಅರಿವಿನ ಹೊರಮೈಯಲ್ಲಿ ಬದುಕಲು ಸಂತೋಷಪಡುತ್ತೇವೆ. ಆಲೋಚಿಸುವಿಕೆಯು ಮನಸ್ಸಿನ ಕ್ರಿಯೆ ಎಂದು ನಾವು ಸ್ವೀಕರಿಸಿದ್ದೇವೆ. ಸೇನಾ ಜನರಲ್ ಸಾಮೂಹಿಕ ಕಗ್ಗೊಲೆಯ ಬಗ್ಗೆ ಚಿಂತಿಸುತ್ತಾನೆ. ಕುತ್ಸಿತ ರಾಜಕಾರಣಿ, ಜ್ಞಾನಿ ಪ್ರಾಧ್ಯಾಪಕ, ಬಡಗಿ ಇವರೆಲ್ಲರ ಆಲೋಚನೆಯನ್ನೂ ಸ್ವೀಕರಿಸಿದ್ದೇವೆ. ಗಂಭೀರವಾದ ಚಿಂತನ ಎಂಬುದಿದೆಯೆ ? ಎಲ್ಲ ಬಗೆಯ ಚಿಂತನವೂ ಮನಸ್ಸಿನ ಮೇಲ್ಮೈಯ ಚಟುವಟಿಕೆಯಲ್ಲವೆ ? ಆಲೋಚನೆಯಲ್ಲಿ ಮನಸ್ಸು ಆಳವಾಗಿರುವುದೆ ? ಕಾಲದ ಪರಿಣಾಮವಾಗಿರುವ ಕ್ರೋಢೀಕರಿಸಲ್ಪಟ್ಟಿರುವ, ಸ್ಮೃತಿಯ ಅನುಭವದ ಪರಿಣಾಮವಾದ ಮನಸ್ಸು ತನ್ನದಲ್ಲದರ ಬಗ್ಗೆ ಅರಿವು ಹೊಂದಲು ಸಾಧ್ಯವೆ ? ಮನಸ್ಸು ಸದಾ ತಡಕಾಡುತ್ತದೆ. ತನ್ನನ್ನು ಆವರಿಸುವ ಚಟುವಟಿಕೆಗಳಿಗೆ ಮೀರಿದ್ದನ್ನು ಗಳಿಸಲು ಸದಾ ಯತ್ನಿಸುತ್ತದೆ. ಆದರೆ ಅದು ಯಾವ ಕೇಂದ್ರದಿಂದ ಅರಸುವಿಕೆಯನ್ನು ಶುರುಮಾಡುತ್ತದೋ ಆ ಕೇಂದ್ರ ಬದಲಾಗದೆ ಹಾಗೆಯೇ ಉಳಿಯುತ್ತದೆ.

ಮನಸ್ಸು ಎಂಬುದು ಕೇವಲ ಮೇಲು ಮೇಲಿನ ಚಟುವಟಿಕೆಯಲ್ಲ. ಅದು ಶತಮಾನಗಳಿಂದ ಗುಪ್ತವಾಗಿರುವ ಚಲನೆಯೂ ಹೌದು. ಈ ಚಲನೆಗಳು ಬಾಹ್ಯ ಚಟುವಟಿಕೆಗಳನ್ನು ನಿಯಂತ್ರಿಸುತ್ತವೆ. ಇಲ್ಲವೇ ಪರಿಷ್ಕರಿಸುತ್ತದೆ. ಹೀಗಾಗಿ ಮನಸ್ಸು ತನ್ನದೇ ಆದ ದ್ವಂದ್ವಾತ್ಮಕ ತಿಕ್ಕಾಟವನ್ನು ರೂಢಿಸಿಕೊಳ್ಳುತ್ತದೆ. ಇಡಿಯಾದ ಸಮಗ್ರವಾದ ಮನಸ್ಸಿಲ್ಲ. ಅದು ಒಂದಕ್ಕೊಂದು ವಿರುದ್ಧವಾದ ಹಲವು ಭಾಗಗಳಾಗಿ ಒಡೆದಿದೆ. ಸಮನ್ವಯ ಗೊಳಿಸುವ ಮನಸ್ಸು ಈ ವಿಭಜಿತ ಭಾಗಗಳ ನಡುವೆ ಶಾಂತಿ ಸ್ಥಾಪಿಸಲು ಸಾಧ್ಯವಿಲ್ಲ. ಆಲೋಚನೆಯ ಮೂಲಕ, ಜ್ಞಾನದ ಮೂಲಕ ಅನುಭವದ ಮೂಲಕ ಇಡಿಗೊಳಿಸಲಾರದ ಮನಸ್ಸು ಈಗಲೂ ಕಾಲ ಹಾಗೂ ದುಃಖದ ಪ್ರತಿಫಲವೇ ಆಗಿರುತ್ತದೆ. ಅದು ಈಗಲೂ ಸನ್ನಿವೇಶದ ಕೂಸಾಗಿರುತ್ತದೆ. ಕ್ರೋಢೀಕೃತವಾದುದಾಗಿರುತ್ತದೆ.

ನಾವು ಸಮನ್ವಯದ ಸಮಸ್ಯೆಯನ್ನು ತಪ್ಪಾಗಿ ಪರಿಶೀಲಿಸುತ್ತಿದ್ದೇವೆ. 'ಭಾಗ'ವು ಎಂದೂ 'ಇಡಿ'ಯಾಗದು. ಒಂದು ಭಾಗದ ಮೂಲಕ ಇಡಿಯನ್ನು ಸಾಕಾರಗೊಳಿಸಲಾಗದು. ಆದರೆ ನಾವು ಅದನ್ನು ಗಮನಿಸುವುದಿಲ್ಲ. ಒಂದು-ತಾನೇ ದೊಡ್ಡದಾಗುತ್ತಾ ಹಲವು ಭಾಗಗಳನ್ನು ಒಳಗೊಳ್ಳುವುದನ್ನು ಗಮನಿಸುತ್ತೇವೆ. ಆದರೆ ಹಲವು ಭಾಗಗಳನ್ನು ಒಟ್ಟಿಗೆ ಸಮೀಪ ತರುವುದು ಸಮನ್ವಯವಲ್ಲ. ವಿವಿಧ ಭಾಗಗಳ ನಡುವೆ ಸಾಮರಸ್ಯವಿದ್ದಲ್ಲಿ ಸಮನ್ವಯಕ್ಕೆ ವಿಶೇಷ ಮಹತ್ವ ಕೂಡಾ ಇರುವುದಿಲ್ಲ. ಸಾಮರಸ್ಯ ಅಥವಾ ಸಮಗ್ರತೆ ಅಷ್ಟು ಮುಖ್ಯವಲ್ಲ. ಏಕೆಂದರೆ ಗಮನ, ಅವಧಾನ, ಸರಿಯಾದ ಶಿಕ್ಷಣ ಇತ್ಯಾದಿಗಳ ಮೂಲಕ ಇದನ್ನು ಸಾಧಿಸಬಹುದು. ಆದರೆ ಅಜ್ಞಾತವು ರೂಪ ತಳೆಯುವುದೇ ಅತ್ಯಂತ ಮುಖ್ಯ ವಿಷಯ. ಜ್ಞಾತವು ಎಂದೂ ಅಜ್ಞಾತವನ್ನು ಬರಮಾಡಿಕೊಳ್ಳಲಾರದು. ಮನಸ್ಸು ತಾನೇ ನಿರ್ಮಿಸಿದ ಸಮನ್ವಯದ ಮೂಲಕ ಸಂತಸದಿಂದ ಬದುಕಲು ಬಯಸುತ್ತದೆ. ಆದರೆ ಇದು ಅಜ್ಞಾತದ ಸೃಜನಶೀಲತೆಯನ್ನು ಸೃಷ್ಟಿಸಲಾರದು.

ಸ್ವ-ಸುಧಾರಣೆ ಎಂಬುದು ನಿಜವಾಗಿಯೂ ಸಾಧಾರಣತೆ. ಸದ್ಗುಣ, ಸಾಮರ್ಥ್ಯದೊಡನೆ ಗುರುತಿಸುವಿಕೆ, ಯಾವುದೇ ಬಗೆಯ ಧನಾತ್ಮಕ ಅಥವಾ ಋಣಾತ್ಮಕ ಭದ್ರತೆ ಇವುಗಳ ಮೂಲಕ 'ಸ್ವ' ಸುಧಾರಣೆ ಮಾಡಿಕೊಳ್ಳುವುದು ತನ್ನನ್ನು ತಾನು ಆವರಿಸುವ ಪ್ರಕ್ರಿಯೆ. ಆಕಾಂಕ್ಷೆಯ ಸುಧಾರಣೆಗೆ ಕಾರಣವಾಗುತ್ತದೆ. ಏಕೆಂದರೆ ಆಕಾಂಕ್ಷೆ ಎಂಬುದು ಕ್ರಿಯೆಯ ಮೂಲಕ, ಗುಂಪಿನ ಮೂಲಕ, ವಿಚಾರದ, ಮೂಲಕ 'ಸ್ವ'ದ ಈಡೇರಿಕೆ; 'ಸ್ವ' ಎಂಬುದು ಜ್ಞಾತದ ಕೇಂದ್ರ. ಅದು ಗತಕಾಲವು ವರ್ತಮಾನದಲ್ಲಿ ನುಸುಳಿ ಭವಿಷ್ಯಕ್ಕೆ ಸರಿಯುವ ಚಲನೆ. ಜ್ಞಾತದ ಕ್ಷೇತ್ರದಲ್ಲಿ ನಡೆವ ಎಲ್ಲ ಚಟುವಟಿಕೆ ಮನಸ್ಸಿನ ಠೊಳ್ಳುತನಕ್ಕೆ ಕಾರಣವಾಗುತ್ತದೆ. ಮನಸ್ಸು ಎಂದೂ ಮಹತ್ತಾಗಲು ಸಾಧ್ಯವಿಲ್ಲ. ಏಕೆಂದರೆ ಮಹತ್ತೆಂಬುದು ಅಗಣಿತ. ಜ್ಞಾತವು ಹೋಲಿಕೆಗೆ ಒಳಪಡುತ್ತದೆ. ಜ್ಞಾತದ ಎಲ್ಲ ಚಟುವಟಿಕೆಗಳು ದುಃಖವನ್ನುಂಟುಮಾಡುತ್ತವೆ.


●

*(1ನೇ ಪುಟದಿಂದ ಮುಂದುವರೆದಿದೆ)*

ವಿಚಾರವೆಂದರೆ ಕಾಲ. ಕಾಲ ಹಾಗೂ ಭೂತ (past)ದಿಂದ ಬೇರ್ಪಡಿಸಲಾಗದ ಅನುಭವ ಮತ್ತು ಜ್ಞಾನದಿಂದ ವಿಚಾರ ಹುಟ್ಟುತ್ತದೆ. ಕಾಲವು ಮನುಷ್ಯನ ಮಾನಸಿಕ ಶತ್ರು. ನಮ್ಮ ಕ್ರಿಯೆಯು ಜ್ಞಾನವನ್ನು ಆಧರಿಸಿರುವುದರಿಂದ ಕಾಲವನ್ನೂ ಅವಲಂಬಿಸಿದೆ. ಹಾಗಾಗಿ ಮನುಷ್ಯ ಯಾವಾಗಲೂ 'ಭೂತ'ದ ದಾಸನಾಗಿರುತ್ತಾನೆ. ಕಾಲವು ಶಾಶ್ವತವಾಗಿ ಮಿತಿಯುಳ್ಳದ್ದಾಗಿರುವುದರಿಂದ, ನಾವು ಸತತವಾಗಿ ಸಂಘರ್ಷ ಹಾಗೂ ಹೋರಾಟದಲ್ಲಿ ಜೀವಿಸುತ್ತಿರುತ್ತೇವೆ. ಮಾನಸಿಕ ವಿಕಾಸ ಎಂಬುದಿಲ್ಲ.

ಮನುಷ್ಯನಿಗೆ ಯಾವಾಗ ತನ್ನ ವಿಚಾರಗಳ ಸಂಚಾರದ ಅರಿವು ಆಗುತ್ತದೆಯೋ ಆಗ ಆತ ಆಲೋಚಕನಿಗೂ ಆಲೋಚನೆಗೂ ನಡುವೆ, ಅವಲೋಕಿಸುವವನಿಗೂ ಅವಲೋಕಿಸಲ್ಪಡುವ ವಸ್ತುವಿಗೂ ನಡುವೆ, ಅನುಭವಿಸುವವನಿಗೂ ಅನುಭವಕ್ಕೂ ನಡುವಿನ ವಿಭಜನೆಯನ್ನು ನೋಡುತ್ತಾನೆ. ಈ ವಿಭಜನೆಯು ಕೇವಲ ಭ್ರಮೆ ಎಂಬುದನ್ನು ತಿಳಿಯುತ್ತಾನೆ. ಆಗ ಭೂತದ ಅಥವಾ ಕಾಲದ ಯಾವುದೇ ನೆರಳಿಲ್ಲದ ಒಳನೋಟವೇ ಆಗಿರುವ ಪರಿಶುದ್ಧ ಅವಲೋಕನ ಸಾಧ್ಯವಾಗುತ್ತದೆ. ಕಾಲಾತೀತವಾದ ಈ ಒಳನೋಟವು ಆಳವಾದ ಹಾಗೂ ಮೂಲಭೂತವಾದ ಮಾನಸಿಕ ಪರಿವರ್ತನೆಯನ್ನು ತರುತ್ತದೆ.

ಸಂಪೂರ್ಣವಾದ ನೇತ್ಯಾತ್ಮಕತೆ (negative)ಯೇ ಇತ್ಯಾತ್ಮಕ (positive) ವಾದುದರ ಸಾರ. ಮಾನಸಿಕವಾಗಿ ವಿಚಾರವು ಸೃಷ್ಟಿಸಿರುವ ಎಲ್ಲಾ ವಿಷಯಗಳು ನಿರಾಕರಣೆಗೊಂಡಾಗ ಮಾತ್ರ ಅನುಕಂಪ ಮತ್ತು ಅರಿವಿನ ರೂಪವಾಗಿರುವ ಪ್ರೀತಿಯು ಪ್ರಕಟಗೊಳ್ಳುತ್ತದೆ."




## ಮನವಿ

ನಮ್ಮ ವಾರ್ತಾಪತ್ರವನ್ನು ಮೇ 1999ರಿಂದ ಇಲ್ಲಿಯವರೆಗೆ ಉಚಿತವಾಗಿ ಕಳುಹಿಸಲಾಗುತ್ತಿದ್ದ ವಿಷಯ ತಮಗೆಲ್ಲ ವಿದಿತವೇ ಇದೆ. ಆದರೆ ಇತ್ತಲಾಗಿ ಅದನ್ನು ಪ್ರಕಟಗೊಳಿಸುವಲ್ಲಿ ಹಾಗೂ ಅಂಚೆವೆಚ್ಚ ಇತ್ಯಾದಿಗಳು ತುಂಬಾ ಹೆಚ್ಚಾಗಿರುವ ಕಾರಣ ಇನ್ನು ಮುಂದೆ ಉಚಿತವಾಗಿ ಕಳುಹಿಸಲು ಸಾಧ್ಯವಾಗದ ಹಾಗಾಗಿದೆ. ನಮ್ಮ ಆತ್ಮೀಯ ಓದುಗರು, ಆಗಾಗ ಕೊಂಚ ಸಹಾಯಧನವೆಂದು ಅಲ್ಪ ಹಣವನ್ನು ಕಳುಹಿಸುತ್ತಿದ್ದರಾದರೂ ಅದು ಸಾಕಾಗದ ಕಾರಣ ಬರುವ ಮೇ ತಿಂಗಳ 2005ರ ಸಂಚಿಕೆಯಿಂದ, ನಮ್ಮ ಪತ್ರಿಕೆಯನ್ನು ಕೇವಲ ಚಂದಾದಾರರಿಗೆ ಮಾತ್ರ ಕಳಿಸುವುದೆಂದು ನಿರ್ಣಯ ಮಾಡಲಾಗಿದೆ. ಚಂದಾ ಹಣದ ವಿವರ ಈ ಪ್ರಕಾರ ಇದೆ.

ವಾರ್ಷಿಕ ಚಂದಾ ದರ : ರೂ. 20/-
ಪಂಚವಾರ್ಷಿಕ ಚಂದಾ ದರ : ರೂ. 100/-

ಆದ್ದರಿಂದ ಓದುಗರು, ತಮ್ಮ ಚಂದಾಹಣವನ್ನು ಮುಂಗಡವಾಗಿ ಡಿಮ್ಯಾಂಡ್ ಡ್ರಾಫ್ಟ್ ಮೂಲಕ - "Bangalore Education Centre, KFI" ಇವರ ಹೆಸರಿನಲ್ಲಿ ತಮ್ಮ ಹೆಸರು, ಪೂರ್ಣ ವಿಳಾಸಗಳನ್ನು ಇದಕ್ಕೆ ಲಗತ್ತಿಸಿರುವ ಫಾರಂನೊಂದಿಗೆ ಕಳುಹಿಸಿ, ಪತ್ರಿಕೆಯು ನಿರಂತರ ತಮಗೆ ತಲುಪುವಂತೆ ಸಹಕರಿಸಬೇಕೆಂದು ಪ್ರಾರ್ಥಿಸುತ್ತೇವೆ. ನವೆಂಬರ್ 2004 ಹಾಗೂ ಫೆಬ್ರವರಿ 2005 ಈ ಎರಡು ಸಂಚಿಕೆಗಳನ್ನು ಎಂದಿನಂತೆ ಉಚಿತವಾಗಿ ಕಳುಹಿಸಲಾಗುವುದು.

---

### ಚಂದಾದಾರರ ನೋಂದಣಿ ಫಾರ್ಮ್

ಹೆಸರು : ________________________

ಪೂರ್ಣ ವಿಳಾಸ : ________________________
________________________

ಚಂದಾ ವಿವರ
ವಾರ್ಷಿಕ ರೂ. 20/-
ಪಂಚವಾರ್ಷಿಕ ರೂ. 100/-

ಡಿಮ್ಯಾಂಡ್ ಡ್ರಾಫ್ಟ್ "Bangalore Education Centre, KFI" ಇವರ ಹೆಸರಿನಲ್ಲಿ / ರೂ. ..............................
ಬ್ಯಾಂಕ್ ..................................................................... ನಂ. ......................... ದಿನಾಂಕ: ...............................
ಕಳುಹಿಸಲಾಗಿದೆ

ದಿನಾಂಕ :

ಚಂದಾದಾರರ ಸಹಿ

## ಜೆ.ಕೆ. ಪುಸ್ತಕ ಮಾಲೆ ಪ್ರಕಟಣೆ

ಬೆಂಗಳೂರಿನ ಕೃಷ್ಣಮೂರ್ತಿ ಶಿಕ್ಷಣ ಕೇಂದ್ರವು ಜೆ.ಕೆ.ಯವರ ಪುಸ್ತಕಗಳನ್ನು ಕನ್ನಡದಲ್ಲಿ ಭಾಷಾಂತರಿಸಿ ಹೊಸ ವಿನ್ಯಾಸದೊಂದಿಗೆ ಸುಂದರವಾಗಿ ಪ್ರಕಟಿಸಲು ಆರಂಭಿಸಿದೆ. ಈಗಾಗಲೇ ಬಿಡುಗಡೆಯಾದ ಪುಸ್ತಕಗಳ ಮಾಹಿತಿ ಕೆಳಕಂಡಂತಿದೆ.

೧. **ಧ್ಯಾನ ಚಿಂತನ**
ಅನು. ಡಾ. ನಿ. ಮುರಾರಿ ಬಲ್ಲಾಳ — ರೂ. ೬೫/-

೨. **ಹಿಂಸೆಯನ್ನು ಮೀರಿ**
ಅನು. ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ — ರೂ. ೧೨೦/-

೩. **ಕ್ರಿಯೆ ಮತ್ತು ಸಂಬಂಧ**
ಅನು. ಬಿ.ಎ. ಸನದಿ — ರೂ. ೧೫/-

೪. **ಮೊದಲ ಹಾಗೂ ಕೊನೆಯ ಬಿಡುಗಡೆ**
ಅನು. ಶ್ರೀಮತಿ ರುಕ್ಮಿಣಿ ಕೃಷ್ಣಮೂರ್ತಿ — ರೂ. ೧೫೦/-

೫. **ಕಾಲ ಮತ್ತು ಕಾಲರಹಿತ**
ಅನು. ಶ್ರೀಮತಿ ವನಮಾಲಾ ರಂಗನಾಥ ರಾವ್ — ರೂ. ೧೦/-

೬. **ಸಂಸ್ಕೃತಿ ಸಂಗತಿ**
ಅನು. ಪ್ರೊ. ಎಚ್.ಎಸ್. ರಾಘವೇಂದ್ರ ರಾವ್ — ರೂ. ೧೫೦/-

೭. **ಧಾರ್ಮಿಕ ಜೀವನ ಮತ್ತು ಬದುಕಿನ ಕಲೆ**
ಅನು. ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ — ರೂ. ೧೫/-

೮. **ಅನುದಿನ ಚಿಂತನ**
ಅನು. ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ — ರೂ. ೧೬೦/-

೯. **ಬಾಳಿಗೊಂದು ಭಾಷ್ಯ - ಸಂಪುಟ ೧**
ಅನು. ಡಾ. ಮಹಾಬಲೇಶ್ವರರಾವ್ — ರೂ. ೧೩೦/-

೧೦. **ಭಯ, ಸ್ವಾತಂತ್ರ್ಯ ಮತ್ತು ಶಿಕ್ಷಣ**
ಅನು. ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ — ರೂ. ೨೦/-

೧೧. **ಶಿಕ್ಷಣ ಮತ್ತು ಜೀವನ**
ಅನು. ಡಾ. ಎಚ್.ಎಸ್. ರಾಘವೇಂದ್ರ ರಾವ್ — ರೂ. ೬೫/-

೧೨. **ಭಯದಾಚೆಯ ಬದುಕು**
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ — ರೂ. ೨೦/-

೧೩. **ದುಃಖಕ್ಕೆ ವಿದಾಯ**
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ — ರೂ. ೨೫/-

೧೪. **ಸಂಘರ್ಷವಿರದ ಬದುಕಿಗಾಗಿ**
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ — ರೂ. ೨೫/-

೧೫. **ಸಂಬಂಧವೆಂದರೇನು?**
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ — ರೂ. ೨೫/-

೧೬. **ಜೆ.ಕೆ. ಜೀವನ ದರ್ಶನ**
ಲೇಖಕರು : ನಿ. ಮುರಾರಿ ಬಲ್ಲಾಳ — ರೂ. ೧೩೦/-

೧೭. **ಜೆ. ಕೃಷ್ಣಮೂರ್ತಿ - ಶಿಕ್ಷಣ**
(ದ್ವಿತೀಯ ಆವೃತ್ತಿ) ಎಸ್.ಡಿ. ಕಾಶೀಕರ — ರೂ. ೯೦/-

೧೮. **ತಿಳಿದುದೆಲ್ಲವ ಬಿಟ್ಟು...**
ಪ್ರೊ. ಜಿ. ವೆಂಕಟಸುಬ್ಬಯ್ಯ — ರೂ. ೯೦/-

೧೯. **ಬಾಳಿಗೊಂದು ಭಾಷ್ಯ - ಸಂಪುಟ ೨**
ಡಾ. ಮಹಾಬಲೇಶ್ವರ ರಾವ್ — ರೂ. ೧೫೦/-

೨೦. **ಪ್ರೀತಿ ಎಂದರೇನು?**
ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ — ರೂ. ೨೫/-

### Sahyadri Gathering in Nov. 2005 (KFI)

**ಕೃಷ್ಣಮೂರ್ತಿ ಫೌಂಡೇಶನ್ ಇಂಡಿಯಾ, ವಾರ್ಷಿಕ ಸಮಾವೇಶವು ಇದೇ ನವೆಂಬರ್ ದಿ. 17ರಿಂದ 21ರ ವರೆಗೆ ಪುಣೆಯ ಬಳಿಯ ಸಹ್ಯಾದ್ರಿ ಅಧ್ಯಯನ ಕೇಂದ್ರದಲ್ಲಿ ನಡೆಯಲಿದೆ ಹೆಚ್ಚಿನ ವಿವರಗಳಿಗಾಗಿ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಬೇಕಾಗಿ ವಿನಂತಿ.**

ವಿಳಾಸ : **Krishnamurti Study Centre - Sahyadri**,
The Sahyadri School, P.O. Tiwai Hill,
Tal. Rajgurunagar, Dist. Pune 410513, India

### ಬೇಕಾಗಿದ್ದಾರೆ

**ಬೆಂಗಳೂರು ಶಿಕ್ಷಣ ಕೇಂದ್ರ (ಕೆ.ಎಫ್.ಐ) ಅಧ್ಯಯನ ಕೇಂದ್ರದಿಂದ ಪ್ರಕಟಗೊಳ್ಳುವ ಪುಸ್ತಕಗಳನ್ನು ಕರ್ನಾಟಕದಾದ್ಯಂತ ಮಾರಾಟ, ಹಂಚಿಕೆ ವ್ಯವಸ್ಥೆ, ಇತ್ಯಾದಿ ಕೆಲಸಗಳನ್ನು ನೋಡಿಕೊಂಡು ಹೋಗುವುದಿದೆ.**

**ಸಂಬಳ ಇತ್ಯಾದಿಗಳ ವಿಷಯವಾಗಿ, ಸಮಕ್ಷಮ ಸಂದರ್ಶನದಲ್ಲಿ ಚರ್ಚಿಸಬಹುದಾಗಿದೆ. ಆಸಕ್ತರು ತಮ್ಮ ಶಿಕ್ಷಣ, ಆಸಕ್ತಿ ಹಾಗೂ ಇತರ ವೈಯಕ್ತಿಕ ವಿವರಗಳೊಂದಿಗೆ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಬೇಕಾಗಿ ವಿನಂತಿ.**

**Incharge,** Krishnamurti Study Centre (KFI),
Kanakapura Road, Thathaguni P.O.Bangalore - 560 062

---

*ಖಾಸಗಿ ಪ್ರಸಾರಕ್ಕಾಗಿ ಮಾತ್ರ*
*(For private circulation only)*

Printed, Published and Owned by:
Dr. Satish R Inamdar
Director
**The Study, Bangalore Education Centre**
Krishnamurti Foundation India
Thatguni Post, Bangalore - 560 062.
Tel.: 080 - 28435243
Editor : Dr. Satish R Inamdar
E-mail : kfistudy@vsnl.com

Printed at : Omkar Offset Printers, # 3/3, 1st Main Road
N.T. Pet, Bangalore - 2. Telefax : 26708186, 26709026
e-mail : omkar@blr.vsnl.net.in Website : www.omkarprinters.com

Book packet containing periodicals.

Price : Single copy Rs. 5/-
Annual Subscription : Rs. 20/-